**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊಳೆನರಸೀಪುರ**

PW –5

**OS No**: 22 /2016

| | |
|---|---|
| ಹೆಸರು | **ರೇಣುಕುಮಾರ್ ವೈ.ಎಂ** |
| ತಂದೆ/ಗಂಡನ ಹೆಸರು | **ಲೇ . ವೈ ಟಿ ಮಾದೇಗೌಡ** |
| ವಯಸ್ಸು | **57 ವರ್ಷ** |
| ಉದ್ಯೋಗ | **ತಹಸಿಲ್ದಾರ್ , ಹೊಳೆನರಸೀಪುರ** |
| ವಾಸಸ್ಥಳ | **ಹೊಳೆನರಸೀಪುರ** |

ದಿನಾಂಕಃ 02.08.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ವಾದಿಯ ಪರ ಶ್ರೀ ಆರ್ ಡಿ ಆರ್ ವಕೀಲರಿಂದ**

ನಾನು ದಿಃ 03.03.2025 ರಿಂದ ಇಲ್ಲಿಯವರೆಗೆ ಹೊಳೆನರಸೀಪುರದಲ್ಲಿ ತಹಸಿಲ್ದಾರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ನಿಪಿ 3 ರಿಂದ 5 ದಾಖಲಾತಿಯನ್ನು ನಮ್ಮ ಕಛೇರಿಯಿಂದ ನೀಡಲಾಗಿದೆ ಎಂದರೆ ಸಾಕ್ಷಿ ನಮ್ಮ ಕಛೇರಿಯ ಸೀಲು ಇದೆ ಆದರೆ ಅವುಗಳನ್ನು ನಾನು ನೀಡಿಲ್ಲ ನಮ್ಮ ಕಛೇರಿಯ ಶಿರಸ್ತೆದಾರ್ ಆದ ಲೋಕೇಶ್ ಅವರು ನೀಡಿದ್ದಾರೆ ಎಂದು ನುಡಿಯುತ್ತಾರೆ. ನಮ್ಮ ಕಛೇರಿಯಲ್ಲಿ ಈಗಲೂ ಸಹ ಲೋಕೇಶ್ ಅವರು ಶಿರಸ್ತೆದಾರ್ ಆಗಿ ಕೆಲಸ ಮಾಡುತ್ತಿದ್ದಾರೆ. ನಮ್ಮ ಕಛೇರಿಯ ಸೀಲುಗಳು ಸಂಬಂಧ ಪಟ್ಟ ಕೇಸ್ ವರ್ಕರ್ ಹಾಗೂ ಶಿರಸ್ತೆದಾರ್ ಬಳಿ ಇರುತ್ತವೆ . ನಮ್ಮ ಕಛೇರಿಯಲ್ಲಿ ದಾಖಲಾತಿಯ

ದೃಢೀಕೃತ ನಕಲುಗಳನ್ನು ನೀಡುವ ಜವಾಬ್ದಾರಿ ಶಿರಸ್ತೆದಾರ್ ಅವರದ್ದು ಆಗಿರುತ್ತದೆ.

ವಿಭಾಗ ಪತ್ರದ ಮೇಲೆ ಖಾತೆ ಬದಲಾವಣೆ ಮಾಡಲು ನಿಮ್ಮ ಕಛೇರಿಗೆ ಅರ್ಜಿ ಕೊಟ್ಟರೆ ನೀವು ಯಾವ ದಾಖಲಾತಿಗಳನ್ನು ಪರಿಶೀಲನೆ ಮಾಡುತ್ತೀರಿ ಎಂದರೆ ಸಾಕ್ಷಿ ವಿಭಾಗ ಪತ್ರ, ಸಂಬಂಧ ಪಟ್ಟ ಎಂ ಆರ್ , ಆರ್ ಟಿ ಸಿ , ವಂಶವೃಕ್ಷವನ್ನು ನೋಡುತ್ತೇವೆ ಎಂದು ನುಡಿಯುತ್ತಾರೆ. ಈ ರೀತಿ ದಾಖಲಾತಿಗಳನ್ನು ಸಲ್ಲಿಸಿ ವಿಭಾಗ ಪತ್ರದ ಪ್ರಕಾರ ಖಾತೆ ಮಾಡಲು ಅರ್ಜಿ ಕೊಟ್ಟಾಗ ಯಾವ ನಿಯಮಗಳನ್ನು ಅನುಸರಿಸುತ್ತೀರಿ ಎಂದರೆ ಸಾಕ್ಷಿ ಮೊದಲು ಅವುಗಳನ್ನು ಸಂಬಂಧ ಪಟ್ಟ ಆರ್ ಐ ಅವರಿಗೆ ಕಳುಹಿಸಿಕೊಡುತ್ತೇವೆ ಅವರು ಅವುಗಳನ್ನು ಸಂಬಂಧ ಪಟ್ಟ ಗ್ರಾಮಲೆಕ್ಕಾಧಿಕಾರಿಗಳಿಗೆ ಕಳುಹಿಸಿಕೊಡುತ್ತಾರೆ. ನಂತರ ಸಂಬಂಧ ಪಟ್ಟ ಗ್ರಾಮ ಲೆಕ್ಕಾಧಿಕಾರಿ ದಾಖಲಾತಿಗಳನ್ನು ಪರಿಶೀಲನೆ ಮಾಡಿ ಜೊತೆಗೆ ಸಂಬಂಧ ಪಟ್ಟವರನ್ನು ವಿಚಾರಣೆ ಮಾಡಿ ಅವರಿಗೆ ಫಾರಂ ನಂ 21 ಅನ್ನು ಜಾರಿ ಮಾಡಿ, ಫಾರಂ ನಂ 12 ಅನ್ನು ಪ್ರಚಾರ ಪಡಿಸಿ ಎಲ್ಲಾ ಸರಿ ಇದ್ದರೆ ಆ ಬಗೆ ಆರ್ ಐ ರವರಿಗೆ ವರದಿ ಮಾಡುತ್ತಾರೆ . ನಂತರ ಆರ್ ಐ ಅವರು ಸದರಿ ವರದಿಯ ಆಧಾರದ ಮೇಲೆ ಖಾತೆಗೆ ಆದೇಶ ಮಾಡುತ್ತಾರೆ. ಖಾತೆಗೆ ಆದೇಶ ಮಾಡಿದ ನಂತರ ಎಂ ಆರ್ ಆಗುತ್ತದೆ.

ಖಾತೆ ಇಂಡೀಕರಣಕ್ಕೆ ಸಂಬಂಧಿಸಿದಂತೆ ನಿರ್ವಹಣೆ ಮಾಡಿದ ಕಡತವು ಎ , ಬಿ , ಸಿ ಅಥವಾ ಡಿ ನ ಎಂದರೆ ಸಾಕ್ಷಿ ನೋಡಿ ನುಡಿಯಬೇಕು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಎ ಕಡತವು ಶಾಶ್ವತ ಕಡತವಾಗಿದ್ದು ನಾಶ ಪಡಿಸಲು ಬರುವುದಿಲ್ಲ. ಬಿ ಕಡತವನ್ನು 30 ವರ್ಷಗಳ ವರೆಗೆ ಇಟ್ಟು ಕೊಳ್ಳಬೇಕು. ಸಿ ಕಡತವನ್ನು 10 ವರ್ಷದ ವರೆಗೆ ಇಟ್ಟು ಕೊಳ್ಳಬೇಕು. ಡಿ ಕಡತವನ್ನು 1 ವರ್ಷ ಇಟ್ಟುಕೊಳ್ಳಬೇಕು. ಕಛೇರಿ ಕೈಪಡಿಯಲ್ಲಿ ಕಡತಗಳನ್ನು ನಿರ್ವಹಣೆ ಮಾಡುವ ಅವಧಿ ಮತ್ತು ಯಾವ ಕ್ಯಾಟಗರಿಯಲ್ಲಿ

ಯಾವ ಯಾವ ದಾಖಲಾತಿಗಳನ್ನು ಬರುತ್ತವೆ ಎನ್ನುವ ಮಾಹಿತಿ ಇರುತ್ತದೆ. ಈ ಮಾಹಿತಿ ಇರುವ ಕಛೇರಿಯ ಕೈಪಿಡಿಯನ್ನು ಹಾಜರಿ ಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ.

ಯಾವುದಾದರು ಒಂದು ಕಡತವನ್ನು ನಾಶ ಪಡಿಸಿದರೆ ಆ ಬಗ್ಗೆ ಒಂದು ರಿಜಿಸ್ಟರ್ ಅನ್ನು ನಿರ್ವಹಣೆ ಮಾಡುತ್ತೇವೆ ಎಂದರೆ ಸರಿ . ಯಾವ ಕಡತಗಳನ್ನು ನಾಶ ಪಡಿಸಿದ್ದೇವೆ ಎನ್ನುವ ಬಗ್ಗೆ ಸಂಬಂಧಪಟ್ಟ ಕೇಸ್ ವರ್ಕರ್ ಪಟ್ಟಿ ಮಾಡಿ ಅದನ್ನು ರಿಜಿಸ್ಟರ್ ನಲ್ಲಿ ಬರೆದು ತಹಸಿಲ್ದಾರ್ ಅವರ ಸಹಿ ಪಡೆಯುತ್ತಾರೆ ಎಂದು ಸರಿ . ನಾಶ ಪಡಿಸುವ ಮೊದಲು ಸಹ ತಹಸಿಲ್ದಾರ್ ಅವರ ಸಹಿಯನ್ನು ಪಡೆದಿರುತ್ತಾರೆ ಎಂದರೆ ಸರಿ . ವಿಭಾಗ ಪತ್ರಕ್ಕೆ ಸಂಬಂಧಿಸಿದಂತೆ ಖಾತೆ ಬದಲಾವಣೆ ಮಾಡು ಕಡತವು ಎ ಕ್ಯಾಟಗರಿಯಲ್ಲಿ ಬರುತ್ತದೆ ಎಂದರೆ ನೋಡಿ ಹೇಳಬೇಕು ಎಂದು ನುಡಿಯುತ್ತಾರೆ . ನಿಪಿ 4 ರ ದಾಖಲಾತಿ 21 (ಎ) ನೋಟೀಸು ಎಂದರೆ ಸರಿ . ನಿಪಿ 4 ಸಂಬಂಧಪಟ್ಟ ಗ್ರಾಮಲೆಕ್ಕಾಧಿಕಾರಿ ನೀಡಿರುತ್ತಾರೆ ಎಂದರೆ ಗೊತ್ತಿಲ್ಲ. ನಿಪಿ 5 ವಂಶವೃಕ್ಷ ಎಂದರೆ ಹೌದು. ಅರ್ಜಿ, 21(ಎ) ನೋಟೀಸು, ವಂಶವೃಕ್ಷ ಮತ್ತು ಇತರೆ ದಾಖಲಾತಿಗಳ ಮೇಲೆ ಸಂಬಂಧ ಪಟ್ಟ ಅರ್ಜಿದಾರರು ಹಣ ಕಟ್ಟಿದ ನಂತರ ನಿಪಿ 6ರಂತೆ ಮ್ಯೂಟೇಶನ್ ಮಂಜೂರು ಆಗಿರುತ್ತದೆ ಎಂದರೆ ಹೌದು. ನಿಪಿ 6 ರ ಮ್ಯೂಟೇಶನ್ ನಮ್ಮ ಕಛೇರಿಯಲ್ಲಿ ಇದೆ. ಪಂಚಾಯಿತು ಪಾಲು ಪರಿತ್ ಪ್ರಕಾರ ನಿಪಿ 6 ಮ್ಯೂಟೇಶನ್ ಆಗಿರುತ್ತದೆ. ಎಲ್ಲಾ ಕಾನೂನಾತ್ಮಕ ನೋಟೀಸುಗಳನ್ನು ಜಾರಿ ಮಾಡಿ ತಕರಾರು ಬರದೇ ಇದ್ದಾಗ ಮ್ಯೂಟೇಶನ್ ಮಾಡಿರುತ್ತೇವೆ ಎಂದು ನಿಪಿ 6 ರಲ್ಲಿ ಬರೆಯಲಾಗಿದೆ ಎಂದರೆ ಹೌದು. ನಾನು ಹೇಳಿದಂತಹ ದಾಖಲಾತಿಗಳು ಕೊಡದೆ ಇದ್ದರೇ ನಿಪಿ 6ರ ಮ್ಯೂಟೇಶನ್ ಆಗಲು ಸಾಧ್ಯವಿಲ್ಲ ಎಂದರೆ ಹೌದು. ಒಂದುವೇಳೆ ಪಾಂಚಾಯಿತಿ ಪಾಲು ಪರಿಕ್ ನಂತೆ ಖಾತೆ ಮಾಡಲು ಅರ್ಜಿ ಕೊಟ್ಟಾಗ ಸದರಿ ಪಂಚಾಯಿತಿ ಪಾಲು ಪರಿತ್ ದಾಖಲಾತಿ ಇದ್ದರೆ ಮಾತ್ರ ಮ್ಯೂಟೇಶನ್ ಗೆ ಆದೇಶ ಮಾಡುತ್ತಾರೆ ಎಂದರೆ ಸರಿ . ನಮ್ಮ ಕಛೇರಿಯಲ್ಲಿ ಈ ಪ್ರಕರಣಕ್ಕೆ ಸಂಬಂಧ

ಪಟ್ಟ ದಾಖಲಾತಿ ಇದ್ದರೂ ಸಹ ಪ್ರತಿವಾದಿಗೆ ಸಹಾಯ ಮಾಡವ ಸಲುವಾಗಿ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಕಡತ ಇಲ್ಲ ಎಂದು ಸುಳ್ಳು ಹಿಂಬರಹ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಪ್ರತಿವಾದಿ ನಂ 1, 2(ಎ) ರವರ ಪರ ಶ್ರೀ ಕೆ ಕೆ ಆರ್ ವಕೀಲರಿಂದಃ**

ನ್ಯಾಯಾಲಯದಿಂದ ಸಮನ್ಸ್ ಬಂದ ನಂತರ ನೀವೇನಾದರು ಈ ಪ್ರಕರಣದಲ್ಲಿ ಇರುವ ಮ್ಯಾಟೇಶನ್ ಗೆ ಸಂಬಂಧ ಪಟ್ಟ ಕಡತವನ್ನು ನನ್ನ ಪರಾಮರ್ಶೆಗೆ ಹಾಜರು ಪಡಿಸುವಂತೆ ಸಂಬಂಧ ಪಟ್ಟ ಸಿಬಂದ್ದಿಗಳಿಗೆ ಸೂಚಿಸಿದ್ದಿರ ಎಂದರೆ ಸಾಕ್ಷಿ ಸೂಚಿಸಿದ್ದೆ ಎಂದು ನುಡಿಯುತ್ತಾರೆ. ಪ್ರಶ್ನಿತ ಎಂ.ಆರ್.ಗಳು ಹಳ್ಳಿ ಮೈಸೂರು ನಾಡ ಕಛೇರಿಗೆ ಸಂಬಂಧ ಪಟ್ಟ ದಾಖಲಾತಿಗಳು ಎಂದರೆ ಸರಿ. ನಾನು ಹಳ್ಳಿಮೈಸೂರು ನಾಡಕಚೇರಿಯ ಸ್ಬಿಬಂದಿ ಹಾಗೂ ನಮ್ಮ ಕಚೇರಿಯ ಕೇಸ್ ವರ್ಕರ್ ಕಡೆಯಿಂದ ಮಾಹಿತಿ ತರಿಸಿಕೊಂಡಿದ್ದೇವು. ಹಳ್ಳಿಮೈಸೂರು ನಾಡಕಚೇರಿಯವರು ಹಾಗೂ ನಮ್ಮ ಕಚೇರಿಯ ರೆಕಾರ್ಡ್ ರೂಂ ಶಿರಸ್ತೇದಾರರು ಪ್ರಶ್ನಿತ ಎಂ.ಆರ್.ಗೆ ಸಂಬಂಧಪಟ್ಟ ಕಡತವು ಲಭ್ಯವಿಲ್ಲವೆಂದು ಮಾಹಿತಿ ಕೊಟ್ಟಿರುತ್ತಾರೆ. ಯಾವ ಕಾರಣಕ್ಕಾಗಿ ಲಭ್ಯವಿಲ್ಲ ಎನ್ನುವ ಸ್ಪಷ್ಟಿಕರಣವನ್ನು ನನಗೆ ಕೊಟ್ಟಿಲ್ಲ. ಸ್ಪಷ್ಟಿಕರಣವನ್ನು ಕೊಡುವಂತೆ ನಾನು ಸಂಬಂಧಪಟ್ಟವರಿಗೆ ನೋಟಿಸ್ ಜಾರಿ ಮಾಡಿಲ್ಲ, ಆ ರೀತಿಯ ನೋಟಿಸ್ ಕೊಡಲು ತೊಂದರೆ ಇರಲಿಲ್ಲ.

ನಿಪಿ.6 ನಮ್ಮ ಇಲಾಖೆಯ ಎಂ.ಆರ್. ದಾಖಲಾತಿ ಎಂದರೆ ಸರಿ. ನಿಪಿ.6ರಲ್ಲಿ ವಿಭಾಗದ ಮೇಲೆ ಎಂಬುದಾಗಿ ಬರೆದಿದ್ದು, ಆಗಾದರೆ ವಿಭಾಗವು ನೊಂದಣಿ ಆಗಿರಬೇಕೆಂದರೆ ಹೌದು. ನಿಪಿ.6ರ ಜೊತೆಗೆ ವಿಭಾಗ ಪತ್ರವನ್ನು ಹಾಜರುಪಡಿಸಿಲ್ಲವೆಂದರೆ ಗೊತ್ತಿಲ್ಲ. ನಿಪಿ.5ರಲ್ಲಿ ದಿನಾಂಕ ನಮೂದಿರುವುದಿಲ್ಲವೆಂದರೆ ಸಾಕ್ಷಿ ದಿನಾಂಕ 17.06. ಅಂತ ಬರೆದಿದ್ದು, ವರ್ಷ ಬರೆದಿರುವುದಿಲ್ಲವೆಂದು ನುಡಿಯುತ್ತಾರೆ. ನಿಪಿ.3ರ ದಾಖಲಾತಿಯಲ್ಲಿ ವಿಭಾಗ ಪತ್ರದ ಪ್ರತಿಯನ್ನು ಲಗತ್ತಿಸಿದೆಯೆಂದು

ಬರೆದಿದ್ದು, ಆಗಾದರೆ ಕಡತದಲ್ಲಿ ವಿಭಾಗ ಪತ್ರ ಇರುತ್ತದೆಂದರೆ ಸಾಕ್ಷಿ ಅವರು ಕೊಟ್ಟಿದ್ದರೆ ಇರುತ್ತದೆಂದು ನುಡಿಯುತ್ತಾರೆ. ಇಲ್ಲಿಯವರೆಗೆ ಕಡತವನ್ನು ಪರಿಶೀಲನೆ ಮಾಡಿದರೆ ನಿಪಿ.3ರಲ್ಲಿ ಉಲ್ಲೇಖ ಮಾಡಿದ ವಿಭಾಗ ಪತ್ರ ನಮ್ಮ ಕಚೇರಿಯಲ್ಲಿ ಇರುವುದಿಲ್ಲವೆಂದರೆ ಸಾಕ್ಷಿ ಹೌದು ಕಡತ ಲಭ್ಯವಿಲ್ಲವೆಂದು ನಾವು ಹಿಂಬರಹ ಕೊಟ್ಟಿರುತ್ತೇವೆಂದು ನುಡಿಯುತ್ತಾರೆ. ಯಾವುದೇ ವಿಭಾಗಪತ್ರ ಇರದೇ ಇದ್ದರು ಸಹ ನಮ್ಮ ಕಚೇರಿಯ ಅಧಿಕಾರಿಗಳು ನಿಪಿ.6 ಎಂ.ಆರ್ ನ್ನು ತಪ್ಪಾಗಿ ಮಾಡಿದ್ದಾರೆಂದರೆ ಗೊತ್ತಿಲ್ಲ. ಯಾವುದೇ ಸೂಕ್ತವಾದ ದಾಖಲಾತಿಗಳು ಇರದೇ ಇದ್ದರೂ ಸಹ ನಮ್ಮ ಕಚೇರಿಯ ಅಧಿಕಾರಿಗಳು ಕೆ.ವಿ.ಮಂಜುನಾಥರವರೊಂದಿಗೆ ಷರೀಖಾಗಿ ನಿಪಿ.6ನ್ನು ಸೃಷ್ಟಿ ಮಾಡಿದ್ದಾರೆಂದರೆ ಸರಿಯಲ್ಲ. ಯಾವುದೇ ಪೂರಕ ದಾಖಲಾತಿಗಳು ಇಲ್ಲದೇ ನಿಪಿ.6ನ್ನು ಸೃಷ್ಟಿ ಮಾಡಿದ್ದೇವೆಂದರೆ ಸರಿಯಲ್ಲ. ಯಾವುದೇ ಸೂಕ್ತ ದಾಖಲಾತಿಗಳು ಇಲ್ಲದೇ ನಾವು ಮಾಡಿದ ನಿಪಿ.6ರ ಖಾತೆಯ ಮೇಲೆ ಗೌರಮ್ಮರವರು ಆಸ್ತಿಯಿಂದ ವಂಚಿತರಾಗಿದ್ದಾರೆಂದರೆ ಸರಿಯಲ್ಲ. ನಿಪಿ.30ರಲ್ಲಿ ಕೊಟ್ಟಿರುವ ಹಿಂಬರಹದಲ್ಲಿ ಉಲ್ಲೇಖಿಸಿದ ಎಂ.ಆರ್.5/98–99ಕ್ಕೆ ಸಂಬಂಧಪಟ್ಟಂತೆ ಶ್ರೀಮತಿ ಗೌರಮ್ಮರವರಿಂದ ಕೆ.ವಿ.ಶಂಬುಲಿಂಗಪ್ಪರವರಿಗೆ ನೊಂದಾಯಿತ ಹಕ್ಕು ಖುಲಾಸೆ ಪತ್ರ ಇದೆಯೆಂದರೆ ಗೊತ್ತಿಲ್ಲ. ನಮ್ಮ ಕಚೇರಿಯ ಸಂಬಂಧಪಟ್ಟ ಸಿಬ್ಬಂದಿಗಳು ನನಗೆ ಸರಿಯಾದ ಮಾಹಿತಿ ಕೊಡದೇ ಇರುವುದರಿಂದ ನಾನು ಅಸಮರ್ಪಕ ರೀತಿಯಲ್ಲಿ ನಿಪಿ.30ನ್ನು ಸಮರ್ಥಿಸಿಕೊಳ್ಳುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲು 10ನೇ ಪ್ರತಿವಾದಿ ಪರ ಶ್ರೀ ಎ.ಎಸ್.ವಕೀಲರಿಂದಃ**

ಈ ಪ್ರಕರಣದಲ್ಲಿನ ಪ್ರಶ್ನಿತ ಎಂ.ಆರ್.ಗಳಲ್ಲಿ ಹಕ್ಕು ಕೊಡುವ ದಾಖಲಾತಿ ವಿಭಾಗ ಪತ್ರ ಎಂದರೆ ಹೌದು. ಮೂಲ ವಿಭಾಗ ಪತ್ರವನ್ನು ಇಟ್ಟುಕೊಂಡೆ ಖಾತೆ ಮಾಡುತ್ತಾರೆಂದರೆ ಹೌದು. ಹಕ್ಕು ಕೊಡುವ ದಾಖಲಾತಿ ಮೇಲೆ ಮ್ಯೂಟೇಷನ್ ಆದಾಗ ಸದರಿ ಕಡತವು ಎ ಕ್ಯಾಟಗರಿಯಲ್ಲಿ

ಬರುತ್ತದೆಂದರೆ ಕೈಪಿಡಿಯನ್ನು ನೋಡಿ ಹೇಳುತ್ತೇನೆಂದು ನುಡಿಯುತ್ತಾರೆ. ಈ ದಿನ ನಾನು ನ್ಯಾಯಾಲಯಕ್ಕೆ ಸಾಕ್ಷಿ ನುಡಿಯುವುದಕ್ಕಿಂತ ಮೊದಲು ಕಡತವನ್ನು ಪರಿಶೀಲನೆ ಮಾಡಿಯೇ ಬಂದಿರುತ್ತೇನೆ. ನಾನು ಪರಿಶೀಲನೆ ಮಾಡುವ ಸಂದರ್ಭ ನಮ್ಮ ಅಭಿಲೇಖಾಲಯದಲ್ಲಿ ಕಡತಗಳು ಲಭ್ಯವಿದ್ದ ಬಗ್ಗೆ ಗೊತ್ತಾಗಿತು ಎಂದರೆ ಸಾಕ್ಷಿ ಯಾವುದೇ ಕಡತವು ಲಭ್ಯವಿರುವುದಿಲ್ಲವೆಂದು ನುಡಿಯುತ್ತಾರೆ. ಪ್ರಶ್ನಿತ ಎಂ.ಆರ್.ಗಳ ಕಡತಕ್ಕೆ ಸಂಬಂಧಪಟ್ಟಂತೆ ಕಡತವು ನಾಶವಾಗಿದ್ದರ ಬಗ್ಗೆ ನಾನು ನಮ್ಮ ಕಚೇರಿಯ ದಾಖಲಾತಿಯಲ್ಲಿ ಪರಿಶೀಲನೆ ಮಾಡಿಲ್ಲ. ದಾಖಲಾತಿಗಳನ್ನು ಹಾಜರುಪಡಿಸಿದರೆ ನಿಜಾಂಶ ಗೊತ್ತಾಗುತ್ತದೆಂದು ನಾನು ಹಾರಿಕೆ ಉತ್ತರಗಳನ್ನು ನೀಡುತ್ತಿದ್ದೆನೆಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

ಓ. ಹೇ. ಕೇ. ಸ. ಇ. ಒ,

(ಶ್ರೀಮತಿ. ನಿವೇದಿತಾ ಮಹಾಂತೇಶ್ ಮುನವಳ್ಳಿಮಠ್)
ಹಿ.ವ್ಯ.ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ರವರು ಹೊಳೆನರಸೀಪುರ.